**4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮಂಡ್ಯ.**

**ಎಸ್ ಸಿ ಕೇಸ್ ನಂ.118/2019**

ಪ್ರಾ.ಸಾ. 8

ಚಾ.ಸಾ. 14

**ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಬೋಧಿಸಿದ ದಿನಾಂಕ 29.10.2025**

| | |
|---|---|
| ಸಾಕ್ಷಿದಾರರ ಹೆಸರು | ಟಿ.ಕೆ.ಶಿವರಾಮು |
| ತಂದೆಯ ಹೆಸರು | ಕಾಳಯ್ಯ |
| ವಯಸ್ಸು | 54 ವರ್ಷ |
| ಉದ್ಯೋಗ | ವ್ಯವಸಾಯ |
| ವಾಸ | ತೋಟದ ಮನೆ, ತೊಪ್ಪನಹಳ್ಳಿ ಗ್ರಾಮ |

**ಮುಖ್ಯ ವಿಚಾರಣೆಃ ಮಾನ್ಯ ವಿಶೇಷ ಸರ್ಕಾರಿ ಅಭಿಯೋಜಕರವರಿಂದಃ**

1. ಚಾಸಾ.1 ರಿಂದ ಚಾಸಾ.13, 15 ನನಗೆ ಗೊತ್ತು. ಅವರು ನಮ್ಮ ಊರು ತೊಪ್ಪನಹಳ್ಳಿ ಗ್ರಾಮದವರು. ಆರೋಪಿ 1 ರಿಂದ 14 ಕೂಡ ಗೊತ್ತು. ಸಾಕ್ಷಿ ನ್ಯಾಯಾಲಯದ ಮುಂದೆ ಹಾಜರು ಇರುವ 1 ರಿಂದ 3, 5, 7 ರಿಂದ 14 ನೇ ಆರೋಪಿಗಳನ್ನು ನೋಡಿ ಗುರುತಿಸಿ ಅವರೂ ಕೂಡ ನಮ್ಮ ಗ್ರಾಮದವರೇ ಎಂದು ನುಡಿಯುತ್ತಾರೆ. 1994 ರಿಂದ ನಮ್ಮ ಮತ್ತು ಆರೋಪಿಗಳ ಸಂಬಂಧ ಚೆನ್ನಾಗಿಲ್ಲ. 1994 ರಲ್ಲಿ ಮಂಡಲ ಪಂಚಾಯಿತಿ ಚುನಾವಣೆ ಬಾಬ್ತು ನಮ್ಮ ಅಣ್ಣ ಟಿ.ಕೆ.ಶಿವಣ್ಣ ಚುನಾವಣೆಗೆ ನಿಂತಿದ್ದರು. ಆರೋಪಿಗಳ ಕಡೆಯಿಂದ ಸತ್ಯ ಪ್ರಕಾಶ್ ಚುನಾವಣೆಗೆ ನಿಂತಿದ್ದರು. ಆ ಚುನಾವಣೆಯಲ್ಲಿ ನನ್ನ ಅಣ್ಣ ಟಿ.ಕೆ.ಶಿವಣ್ಣ ಗೆದ್ದಿದ್ದರು. ಆವಾಗಿನಿಂದ ಆರೋಪಿಗಳಿಗೂ ನಮಗೂ ದ್ವೇಷ ಬೆಳೆಯಿತು. ಚಿಕ್ಕಹೈದೇಗೌಡರ ಚಿಕ್ಕಮರಿರವರಿಗೆ ಸೇರಿದ ತೆಂಗಿನ ಮರವನ್ನು ಕೆಂಪಣ್ಣ ಎನ್ನುವವರು ಕಡಿದಿದ್ದರು. ಕೆಂಪಣ್ಣ ಚಿಕ್ಕಮರಿಯವರ ಅಣ್ಣ. ನಮ್ಮ ಅಣ್ಣ ಶಿವಣ್ಣ ಸದರಿ ಮರವನ್ನು ಕಡಿದಿದ್ದಾನೆಂದು ಸತ್ಯ ಪ್ರಕಾಶ್

ಮತ್ತು ಇತರರು ನಮ್ಮ ಅಣ್ಣನ ಮೇಲೆ ದೂರು ನೀಡಿದ್ದರು. ಆಗ ಬಸವೇಗೌಡ ಎನ್ನುವ ಊರಿನ ಮುಖ್ಯಸ್ಥರು ಈ ವಿಷಯವನ್ನು ರಾಜೀ ಮೂಲಕ ಬಗೆಹರಿಸಿದರು. ಆದರೂ ಕೂಡ ನಮ್ಮೊಳಗೆ ಗಲಾಟೆ ನಡೆಯುತ್ತಿತ್ತು. ಈ ಗಲಾಟೆಯಿಂದ ಬೇಸತ್ತ ನಾವು ತೊಪ್ಪನಹಳ್ಳಿ ಬಿಟ್ಟು ಅಲ್ಲಿಂದ ಅರ್ಧ ಕಿ.ಮೀ. ದೂರ ಇರುವ ನಮ್ಮ ತೋಟದಲ್ಲಿ ಮನೆ ಮಾಡಿಕೊಂಡೆವು.

2. 2015 ನೇ ಇಸವಿಯಲ್ಲಿ ಮತ್ತೆ ಗ್ರಾಮ ಪಂಚಾಯಿತಿ ಚುನಾವಣೆ ಬಂತು. ಆ ಚುನಾವಣೆ ಬಾಬ್ತು ನಾವೆಲ್ಲಾ ಗ್ರಾಮದಲ್ಲಿ ಸಭೆ ಸೇರಿದೆವು. ಆ ಸಭೆಯಲ್ಲಿ ಹಿಂದಿನ ಚುನಾವಣೆಯಲ್ಲಿ ಸೋತ ಪುಟ್ಟಸ್ವಾಮಿಯವರಿಗೆ ಒಂದು ಸ್ಥಾನ ನೀಡಿ, ಉಳಿದ ಮೂರು ಸ್ಥಾನಗಳಿಗೆ ಬೇಕಾದರೆ ಜೆಡಿಎಸ್ ನವರು ಸ್ಪರ್ಧಿಸಿ ಅಥವಾ ಅವಿರೋಧವಾಗಿ ಆಯ್ಕೆ ಮಾಡಿಕೊಳ್ಳಿ ಎಂದು ನಮ್ಮ ಕಾಂಗ್ರೆಸ್ ಕಡೆಯವರು ಹೇಳಿದೆವು. ಆರೋಪಿಗಳು ಜೆಡಿಎಸ್ ಪಕ್ಷದ ಬೆಂಬಲಿಗರು. ಆ ಸಭೆಯಲ್ಲಿ ಬೋರಲಿಂಗ ಎನ್ನುವವರಿಗೆ ಮತ್ತು ಜೆಡಿಎಸ್ ಪಕ್ಷದವರಿಗೆ ಗಲಾಟೆ ಆಯಿತು. ಗಲಾಟೆ ಆದಾಗ ಅವಿರೋಧ ಆಯ್ಕೆ ಬೇಡ ಚುನಾವಣೆ ನಡೆಯಲ್ಲಿ ಎಂದು ಹೇಳಿದರು. ಮುಂದೆ ಚುನಾವಣೆ ನಡೆದು ನಮ್ಮ ಗ್ರಾಮದ ನಾಲ್ಕೂ ಗ್ರಾಮ ಪಂಚಾಯಿತಿ ಸ್ಥಾನಗಳಿಗೆ ಕಾಂಗ್ರೆಸ್ ಬೆಂಬಲಿತ ಅಭ್ಯರ್ಥಿಗಳು ಸ್ಪರ್ಧಿಸಿ ಗೆದ್ದರು. ಮುಂದೆ ನನ್ನ ಹೆಂಡತಿ ಶೋಭಾ.ಪಿ. ರವರು ನಮ್ಮ ಗ್ರಾಮದ ಗ್ರಾಮ ಪಂಚಾಯಿತಿ ಅಧ್ಯಕ್ಷರಾಗಿ ಆಯ್ಕೆಯಾದರು.

3. ನಮ್ಮ ಗ್ರಾಮದಲ್ಲಿ ಕಾರ್ತಿಕ್ ಎಂಬುವವನು ವಾಟರ್ ಮ್ಯಾನ್ ಆಗಿ ಕೆಲಸ ಮಾಡುತ್ತಿದ್ದ. ಊರಿನ ಗ್ರಾಮಸ್ಥರು ಕಾರ್ತಿಕ್ ಸರಿಯಾಗಿ ಕೆಲಸ ಮಾಡುವುದಿಲ್ಲ ಎಂದು ಪಂಚಾಯಿತಿಗೆ ದೂರು ನೀಡಿದರು. ಆಗ ಮುತ್ತುರಾಜ್ ಎಂಬುವವನನ್ನು ಪಂಚಾಯಿತಿಯವರು ವಾಟರ್ ಮ್ಯಾನ್ ಆಗಿ ಆಯ್ಕೆ ಮಾಡಿದರು. ಆಗ ಮುತ್ತುರಾಜ್ ಕೂಡ ಸರಿಯಾಗಿ ಕೆಲಸ ಮಾಡುವುದಿಲ್ಲ ಎಂದು ಜೆಡಿಎಸ್ ಪಕ್ಷದವರು ಅವನ ಮನೆ ಬಳಿ ಹೋಗಿ ಜಗಳ ಮಾಡಿದರು. ಆಗ ನಾವು ಗಲಾಟೆ ಮಾಡಿದ ರಾಜು ಎಂಬುವವರ ಮನೆಯ ಬಳಿ ಹೋಗಿ ಯಾಕೆ ಗಲಾಟೆ ಮಾಡುತ್ತೀರಿ ಎಂದು ಕೇಳಿದೆವು. ಆಗ ರಾಜು ಕಾಂಗ್ರೆಸ್ ಬೆಂಬಲಿತರ ಮನೆಗೆ ನೀರು ಬಿಡುತ್ತಾನೆ, ನಮ್ಮ ಮನೆಗಳಿಗೆ ನೀರು ಬಿಡುವುದಿಲ್ಲ ಎಂದು ಆರೋಪ ಮಾಡಿದರು. ಆಗ ರಾಜು ಅಲಿಯಾಸ್ ಕುಂಟ ರಾಜು ಅಷ್ಟಕ್ಕೆ ನಿಲ್ಲಿಸದೇ ಊರಿನ ಅರಳೀಮರದ ಕಟ್ಟೆಯ ಬಳಿ ಬಂದು, ಅಲ್ಲಿದ್ದ ನೀರಿನ ಟ್ಯಾಂಕ್‌ನಿಂದ ಊರಿಗೆ ನೀರು ಸರಬರಾಜು ಮಾಡುವ ಗೇಟ್ ವಾಲ್ ಮೇಲೆ ಕಲ್ಲು ಎತ್ತಿ ಹಾಕಿ ಮುರಿದು ಹಾಕಿದ. ಆಗ ನಾವು ಮತ್ತು ಅಧ್ಯಕ್ಷರು ಪಿಡಿಓ ರವರನ್ನು ಕರೆಸಿ ಸ್ಥಳ ಮಹಜರು ಮಾಡಿಸಿ, ವಿಷಯ

ತಿಳಿಸಿದೆವು. ಆಗ ಅಲ್ಲಿದ್ದ ಹೊನ್ನಯ್ಯ ಅಲಿಯಾಸ್ ಚನ್ನೇಗೌಡ ಈ ಬಗ್ಗೆ ದೂರು ನೀಡುವುದು ಬೇಡ ಇಲ್ಲೇ ಬಗೆಹರಿಸಿಕೊಳ್ಳೋಣ ಎಂದು ಹೇಳಿದರು. ಆ ಘಟನೆಯ ನಂತರ ನನ್ನ ಅಣ್ಣನ ಮಗ ಪ್ರಸನ್ನ ಕುಂಟ ರಾಜುವಿನ ಮನೆಯ ಬಳಿ ಇದ್ದ ಹುಚ್ಚೇಗೌಡರ ಮನೆಗೆ ಹಾಲು ತರಲು ಹೋಗಿದ್ದ. ಅಲ್ಲಿ ಸದರಿ ಕುಂಟ ರಾಜು ಮತ್ತು ಮುತ್ತು ಎನ್ನುವವರು ಪ್ರಸನ್ನನಿಗೆ ಕಲ್ಲಿನಿಂದ ಹೊಡೆದರು. ಅವನಿಗೆ ಹಣೆಗೆ ಗಾಯ ಆಯಿತು. ಆಗ ನಾನು ಮತ್ತು ಶಿವಕುಮಾರ ಅವನನ್ನು ಆಸ್ಪತ್ರೆಗೆ ಸಾಗಿಸಿದೆವು. ಅವನಿಗೆ ಮಂಡ್ಯ ಜಿಲ್ಲಾ ಆಸ್ಪತ್ರೆಯಲ್ಲಿ ಚಿಕಿತ್ಸೆ ಕೊಡಿಸಿದೆವು. ಡಿಸೆಂಬರ್ 25 ನೇ ತಾರೀಖಿನಂದು ಬೆಳಗ್ಗೆ ನನ್ನ ಅಣ್ಣನ ಮಗನಿಗೆ ಕುಂಟ ರಾಜು ಮತ್ತು ಮುತ್ತು ಹೊಡೆದಿದ್ದಾರೆ.

4. ಆ ದಿನ ಸಂಜೆ ನಾವು ನಮ್ಮ ತೋಟದ ಮನೆಯಲ್ಲಿದ್ದಾಗ ನಮ್ಮ ನನ್ನ ಅಣ್ಣ ಮಕ್ಕಳಾದ ಮುತ್ತುರಾಜು, ಶಿವರಾಜು, ಶಿವು, ಹೇಮಂತ್ ಊರಿನಲ್ಲಿ ಯಾವುದೋ ಗಲಾಟೆ ಆಗುತ್ತಿದೆ ಎಂದು ಹೋದರು. ಸುಮಾರು ಮುಕ್ಕಾಲು ಗಂಟೆಯ ನಂತರ ನಾನೂ ಕೂಡ ಊರಿನ ಒಳಗೆ ಹೋದೆ. ನಾನು ಅರಳೀಮರದ ಬಳಿ ಹೋದಾಗ ಅಲ್ಲಿ ಗಲಾಟೆ ನಡೆಯುತ್ತಿತ್ತು. ನಾನು ಹೋದಾಗ 1 ನೇ ಆರೋಪಿ ಚನ್ನೇಗೌಡ ಚಾಸಾ.1 ಮುತ್ತುರಾಜುಗೆ ಮಚ್ಚಿನಿಂದ ತಲೆಗೆ ಹೊಡೆದ. 8 ನೇ ಆರೋಪಿ ಕುಮಾರ ಎಂಬುವವ ಚಾಸಾ.1 ಮುತ್ತುರಾಜುಗೆ ತಲೆಗೆ ರಾಡಿನಿಂದ ಹೊಡೆದ. 2 ನೇ ಆರೋಪಿ ಮಹೇಂದ್ರ ಚಾಕುವಿನಿಂದ ಚಾಸಾ.1 ಮುತ್ತುರಾಜುಗೆ ಚುಚ್ಚಲು ಹೋದಾಗ ಚಾಸಾ.2 ಹೇಮಂತ ಬಂದು ಚಾಸಾ.1 ಮುತ್ತುರಾಜುವನ್ನು ತಬ್ಬಿಕೊಂಡ, ಆಗ ಚಾಕುವಿನ ಏಟು ಚಾಸಾ.2 ಹೇಮಂತನ ಕೈಗೆ ತಾಗಿತು. ಅದೇ ಸಮಯಕ್ಕೆ 8 ನೇ ಆರೋಪಿ ಕುಮಾರ ರಾಡಿನಿಂದ ನನ್ನ ಬಲಭುಜಕ್ಕೆ ಹೊಡೆದ. ಅಷ್ಟರಲ್ಲಿ ವಿದ್ಯುತ್ ಸಂಪರ್ಕ ಹೋಯಿತು. ಬಳಿಕ ನಾನು ಮನೆಯ ಕಡೆ ಹೋದೆ.

5. ನಾನು ಆಸ್ಪತ್ರೆಗೆ ಹೋಗಿ ಚಿಕಿತ್ಸೆ ಪಡೆದಿಲ್ಲ. ಆ ಸಮಯದಲ್ಲಿ ಬಾಯಿ ಮಾತಿನಲ್ಲಿ ಯಾವುದೇ ವಾಗ್ವಾದ ನಡೆದಿಲ್ಲ. ನಾನು ಈ ಕೇಸಿನ ಬಾಬ್ತು ಸಿ ಐ ಡಿ ಕಛೇರಿಯಲ್ಲಿ ಹೇಳಿಕೆ ನೀಡಿದ್ದೇನೆ.

**ಪಾಟೀ ಸವಾಲುಃ *1* ರಿಂದ *3* ನೇ ಆರೋಪಿತರ ಪರ ಶ್ರೀ ಎಸ್ ಹೆಚ್ ಎಸ್ ವಕೀಲರಿಂದಃ**

1. ಚಾಸಾ.1 ನನ್ನ ಅಣ್ಣನ ಮಗ ಎಂದರೆ ಸರಿ. ಎಸ್ ಸಿ ನಂ.82/2017 ರಲ್ಲಿ ನಾನು, ಚಾಸಾ.1 ಮತ್ತು ಈ ಪ್ರಕರಣದ ಕೆಲವು ಸಾಕ್ಷಿಗಳು ಆರೋಪಿತರು ಎಂದರೆ ಸರಿ. ಈ ಪ್ರಕರಣದ 1 ನೇ ಆರೋಪಿ ಎಸ್ ಸಿ ನಂ.82/2017 ರ ಪಿರ್ಯಾದಿ ಎಂದರೆ ಸರಿ. ನಮಗೆ ಆರೋಪಿಗಳ ಮೇಲೆ ಕೋಪ ಇತ್ತು ಎಂದರೆ ಸರಿಯಲ್ಲ. ಕೆಂಪಣ್ಣ ಚಿಕ್ಕಹೈದೇಗೌಡರ ತೆಂಗಿನ ಮರವನ್ನು ಕಡಿದಿದ್ದನ್ನು ನಾನು ನೋಡಿಲ್ಲ. ಕೆಂಪಣ್ಣ ಯಾವುದೇ ಮರ ಕಡಿದಿಲ್ಲ ನಾನು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಕೆಂಪಣ್ಣ ಮರ ಕಡಿದಿದ್ದರಿಂದ ಸತ್ಯ ಪ್ರಕಾಶ್ ಮತ್ತು ಇತರರು ದೂರು ನೀಡಿದ್ದಾರೆಂದು ನಾನು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಬಸವೇಗೌಡರು ಯಾವ ದಿನಾಂಕ ರಾಜೀ ಸಂಧಾನ ಮಾಡಿದರು ಎಂದು ನನಗೆ ಗೊತ್ತಿಲ್ಲ. ಗಲಾಟೆ ನಡೆದ ಸಂದರ್ಭಗಳಲ್ಲಿ ನಾನು ದೂರು ನೀಡಿಲ್ಲ. 1997 ನೇ ಇಸವಿಯಲ್ಲಿ ತೋಟದ ಮನೆಗೆ ವಾಸ್ತವ್ಯ ಬದಲಾಯಿಸಿದೆವು. ಗ್ರಾಮದಲ್ಲಿ ಚುನಾವಣೆ ಬಾಬ್ತು ಸಭೆ ಸೇರಿದ ದಿನಾಂಕ ನನಗೆ ಗೊತ್ತಿಲ್ಲ. ಸದರಿ ಚುನಾವಣೆ ಬಾಬ್ತು ಸಭೆ ಸೇರಿದ ಬಗ್ಗೆ ಲಿಖಿತ ದಾಖಲೆ ಆಗಿಲ್ಲ. ಬಳಿಕ ನಡೆದ ಗಲಾಟೆ ಬಾಬ್ತು ನಾನು ದೂರು ನೀಡಿಲ್ಲ. ನನ್ನ ಹೆಂಡತಿ ಎಸ್ ಸಿ 82/2017 ರಲ್ಲಿ ಆರೋಪಿ ಎಂದರೆ ಸರಿ. ಕಾರ್ತಿಕ್ ಮೇಲೆ ಮೌಖಿಕ ದೂರು ನೀಡಿದ್ದರು. ದೂರು ನೀಡಿದ ದಿನಾಂಕ ನನಗೆ ನೆನಪಿಲ್ಲ. ಗ್ರಾಮಸ್ಥರು ಯಾವುದೇ ದೂರು ನೀಡಿಲ್ಲ ನಾನು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಮುತ್ತುರಾಜುವನ್ನು ವಾಟರ್ ಮ್ಯಾನ್ ಆಗಿ ಆಯ್ಕೆ ಮಾಡಿದ ದಿನಾಂಕ ನನಗೆ ನೆನಪಿಲ್ಲ. ಮುತ್ತುರಾಜು ಮನೆ ಬಳಿ ಹೋಗಿ ಕುಂಟ ರಾಜು ಗಲಾಟೆ ಮಾಡಿದ್ದನ್ನು ನಾನು ನೋಡಿದ್ದೇನೆ. ದಿನಾಂಕ ನೆನಪಿಲ್ಲ, ಸಂಜೆ 5.00 ರಿಂದ 6.00 ರ ಮಧ್ಯೆ ಗಲಾಟೆ ಮಾಡಿದ್ದಾರೆ. ನಾವು ಕುಂಟ ರಾಜುವಿನ ಮನೆ ಬಳಿ ಹೋಗಿ ವಿಚಾರಿಸಿದ ಬಾಬ್ತು ಸಿ ಐ ಡಿ ಪೊಲೀಸರಲ್ಲಿ ಹೇಳಿಕೆ ನೀಡಿದ್ದೇನೆ ಎಂದರೆ ಸರಿ. ನಾನು ಆ ರೀತಿ ಯಾವುದೇ ಹೇಳಿಕೆ ನೀಡಿಲ್ಲ. ನ್ಯಾಯಾಲಯದಲ್ಲಿ ಸೃಷ್ಟಿ ಮಾಡಿ ಹೇಳುತ್ತಿದ್ದೇನೆಂದರೆ ಸರಿಯಲ್ಲ. ಕುಂಟ ರಾಜು ಕಲ್ಲು ಎತ್ತಿ ಹಾಕಿ ಮುರಿದಾಗ ನಾನು ಅಲ್ಲಿ ಇರಲಿಲ್ಲ. ಮುರಿದು ಹಾಕಿದ ಸಮಯ ಗೊತ್ತಿಲ್ಲ. ಕುಂಟ ರಾಜು ಗೇಟ್ ವಾಲ್ ಮೇಲೆ ಕಲ್ಲು ಎತ್ತಿ ಹಾಕಿದ ವಿಚಾರವನ್ನು ಸಿಐಡಿ ಪೊಲೀಸರ ಮುಂದೆ ಹೇಳಿದ್ದೇನೆ. ಆ ರೀತಿ ಸಿಐಡಿ ಪೊಲೀಸರ ಮುಂದೆ ಹೇಳಿಲ್ಲ ಎಂದರೆ ಸರಿಯಲ್ಲ. ಆಗ ನಾವು ಮತ್ತು ಅಧ್ಯಕ್ಷರು ಪಿಡಿಓ ರವರನ್ನು ಕರೆಸಿ ಸ್ಥಳ ಮಹಜರು ಮಾಡಿಸಿ, ವಿಷಯ ತಿಳಿಸಿದೆವು. "ಆಗ ಅಲ್ಲಿದ್ದ ಹೊನ್ನಯ್ಯ ಅಲಿಯಾಸ್ ಚನ್ನೇಗೌಡ ಈ ಬಗ್ಗೆ ದೂರು ನೀಡುವುದು ಬೇಡ ಇಲ್ಲೇ ಬಗೆಹರಿಸಿಕೊಳ್ಳೋಣ" ಎಂದು ಹೇಳಿದರು

ಎಂಬ ಅಂಶವನ್ನು ನಾನು ಸಿಐಡಿ ಪೊಲೀಸರ ಮುಂದೆ ಹೇಳಿಲ್ಲ. ನಾನು ಈಗ ಈ ವಿಚಾರವನ್ನು ಸೃಷ್ಟಿ ಮಾಡಿ ಹೇಳುತ್ತಿದ್ದೇನೆಂದರೆ ಸರಿಯಲ್ಲ. "ನನ್ನ ಅಣ್ಣನ ಮಗ ಪ್ರಸನ್ನ ಕುಂಟ ರಾಜುವಿನ ಮನೆಯ ಬಳಿ ಇದ್ದ ಹುಚ್ಚೇಗೌಡರ ಮನೆಗೆ ಹಾಲು ತರಲು ಹೋಗಿದ್ದ. ಅಲ್ಲಿ ಸದರಿ ಕುಂಟ ರಾಜು ಮತ್ತು ಮುತ್ತು ಎನ್ನುವವರು ಪ್ರಸನ್ನನಿಗೆ ಕಲ್ಲಿನಿಂದ ಹೊಡೆದರು. ಅವನಿಗೆ ಹಣೆಗೆ ಗಾಯ ಆಯಿತು. ಆಗ ನಾನು ಮತ್ತು ಶಿವಕುಮಾರ ಅವನನ್ನು ಆಸ್ಪತ್ರೆಗೆ ಸಾಗಿಸಿದೆವು. ಅವನಿಗೆ ಮಂಡ್ಯ ಜಿಲ್ಲಾ ಆಸ್ಪತ್ರೆಯಲ್ಲಿ ಚಿಕಿತ್ಸೆ ಕೊಡಿಸಿದೆವು. ಡಿಸೆಂಬರ್ 25 ನೇ ತಾರೀಖಿನಂದು ಬೆಳಗ್ಗೆ ನನ್ನ ಅಣ್ಣನ ಮಗನಿಗೆ ಕುಂಟ ರಾಜು ಮತ್ತು ಮುತ್ತು ಹೊಡೆದಿದ್ದಾರೆ" ಎಂಬ ಅಂಶವನ್ನು ನಾನು ಸಿಐಡಿ ಪೊಲೀಸರ ಮುಂದೆ ಹೇಳಿದ್ದೇನೆ. ನಾನು ಆ ರೀತಿ ಹೇಳಿಕೆ ನೀಡಿಲ್ಲ ಎಂದರೆ ಸರಿಯಲ್ಲ. "ಆ ದಿನ ಸಂಜೆ ನಾವು ನಮ್ಮ ತೋಟದ ಮನೆಯಲ್ಲಿದ್ದಾಗ ನಮ್ಮ ನನ್ನ ಅಣ್ಣ ಮಕ್ಕಳಾದ ಮುತ್ತುರಾಜು, ಶಿವರಾಜು, ಶಿವು, ಹೇಮಂತ್ ಊರಿನಲ್ಲಿ ಯಾವುದೋ ಗಲಾಟೆ ಆಗುತ್ತಿದೆ ಎಂದು ಹೋದರು. ಸುಮಾರು ಮುಕ್ಕಾಲು ಗಂಟೆಯ ನಂತರ ನಾನೂ ಕೂಡ ಊರಿನ ಒಳಗೆ ಹೋದೆ.ನಾನು ಅರಳೀಮರದ ಬಳಿ ಹೋದಾಗ ಅಲ್ಲಿ ಗಲಾಟೆ ನಡೆಯುತ್ತಿತ್ತು" ಎಂಬ ಅಂಶವನ್ನು ನಾನು ಸಿಐಡಿ ಪೊಲೀಸರ ಮುಂದೆ ಹೇಳಿದ್ದೇನೆ. ನಾನು ಆ ರೀತಿ ಹೇಳಿಕೆ ನೀಡಿದೇ ಇದ್ದರೂ ಈ ಪ್ರಕರಣಕ್ಕೆ ಅನುಕೂಲವಾಗಲು ಸೃಷ್ಟಿಸಿ ಹೇಳುತ್ತಿದ್ದೇನೆಂದರೆ ಸರಿಯಲ್ಲ. "ನಾನು ಹೋದಾಗ 1 ನೇ ಆರೋಪಿ ಚನ್ನೇಗೌಡ ಚಾಸಾ.1 ಮುತ್ತುರಾಜುಗೆ ಮಚ್ಚಿನಿಂದ ತಲೆಗೆ ಹೊಡೆದ. 8 ನೇ ಆರೋಪಿ ಕುಮಾರ ಎಂಬುವವ ಚಾಸಾ.1 ಮುತ್ತುರಾಜುಗೆ ತಲೆಗೆ ರಾಡಿನಿಂದ ಹೊಡೆದ. 2 ನೇ ಆರೋಪಿ ಮಹೇಂದ್ರ ಚಾಕುವಿನಿಂದ ಚಾಸಾ.1 ಮುತ್ತುರಾಜುಗೆ ಚುಚ್ಚಲು ಹೋದಾಗ ಚಾಸಾ.2 ಹೇಮಂತ ಬಂದು ಚಾಸಾ.1 ಮುತ್ತುರಾಜುವನ್ನು ತಬ್ಬಿಕೊಂಡ, ಆಗ ಚಾಕುವಿನ ಏಟು ಚಾಸಾ.2 ಹೇಮಂತನ ಕೈಗೆ ತಾಗಿತು. ಅದೇ ಸಮಯಕ್ಕೆ 8 ನೇ ಆರೋಪಿ ಕುಮಾರ ರಾಡಿನಿಂದ ನನ್ನ ಬಲಭುಜಕ್ಕೆ ಹೊಡೆದ. ಅಷ್ಟರಲ್ಲಿ ವಿದ್ಯುತ್ ಸಂಪರ್ಕ ಹೋಯಿತು. ಬಳಿಕ ನಾನು ಮನೆಯ ಕಡೆ ಹೋದೆ" ಎಂಬ ಅಂಶವನ್ನು ನಾನು ಸಿಐಡಿ ಪೊಲೀಸರ ಮುಂದೆ ಹೇಳಿಲ್ಲ. ನನ್ನ ಮೇಲಿನ ಪ್ರಕರಣಕ್ಕೆ ಅನುಕೂಲವಾಗಲೆಂದು ನಾನು ಈ ಪ್ರಕರಣದಲ್ಲಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆಂದರೆ ಸರಿಯಲ್ಲ. 1 ನೇ ಆರೋಪಿ ಚನ್ನೇಗೌಡ ಚಾಸಾ.1 ಮುತ್ತುರಾಜುವಿಗೆ ಮಚ್ಚಿನಿಂದ ಹಲ್ಲೆ ಮಾಡಿಲ್ಲ ಎಂದರೆ ಸರಿಯಲ್ಲ. ಅವರ ಕೈಯಲ್ಲಿ ಯಾವುದೇ ಮಚ್ಚು ಇರಲಿಲ್ಲ ಎಂದರೆ ಸರಿಯಲ್ಲ. ನಾವು 1 ನೇ ಆರೋಪಿಯ ಮೇಲೆ ಹಲ್ಲೆ ಮಾಡಿದ್ದರಿಂದ

ಅವರೂ ಕೂಡ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿದ್ದರು ಎಂದರೆ ಸರಿಯಲ್ಲ. ಅವರು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. 8 ನೇ ಆರೊಪಿ ಕುಮಾರ ಚಾಸಾ.1 ಮುತ್ತುರಾಜುರವರಿಗೆ ರಾಡಿನಿಂದ ಹೊಡೆದ ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಅವರ ಕೈಯಲ್ಲಿ ಯಾವುದೇ ರಾಡು ಇರಲಿಲ್ಲ ಎಂದರೆ ಸರಿಯಲ್ಲ. 2 ನೇ ಆರೋಪಿ ಮುತ್ತುರಾಜುಗೆ ಚಾಕುವಿನ ಚುಚ್ಚಲು ಹೋದಾಗ ಹೇಮಂತ ಚಾಸಾ.2 ಬಂದು ಚಾಸಾ.1 ರವರನ್ನು ತಬ್ಬಿ ಕೊಂಡಾಗ ಚಾಕು ಏಟು ಚಾಸಾ.2 ರವರ ಕೈಗೆ ತಾಗಿತು ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಅವರ ಕೈಯಲ್ಲಿ ಯಾವುದೇ ಚಾಕು ಇರಲಿಲ್ಲ ಎಂದರೆ ಸರಿಯಲ್ಲ. 8 ನೇ ಕುಮಾರ ರಾಡಿನಿಂದ ನನ್ನ ಭುಜಕ್ಕೆ ಹೊಡೆದ ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. 8 ನೇ ಆರೋಪಿ ಕೈಯಲ್ಲಿ ಯಾವುದೇ ರಾಡು ಇರಲಿಲ್ಲ ಎಂದರೆ ಸರಿಯಲ್ಲ. ಅಷ್ಟರಲ್ಲಿ ವಿದ್ಯುತ್ ಸಂಪರ್ಕ ಹೋಯಿತು ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ನಮ್ಮ ವಿರುದ್ಧ ಇರುವ ಕೊಲೆ ಪ್ರಕರಣದಿಂದ ತಪ್ಪಿಸಿಕೊಳ್ಳಲು ಈ ಪ್ರಕರಣದಲ್ಲಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆಂದರೆ ಸರಿಯಲ್ಲ.

**ಪಾಟೀ ಸವಾಲುಃ *5, 7* ರಿಂದ *14* ನೇ ಆರೋಪಿತರ ಪರ ಶ್ರೀ ಹೆಚ್ ಎಂ ಎಲ್ ವಕೀಲರಿಂದಃ**

1. ನನ್ನ ವಿರುದ್ಧ ಎಸ್ ಸಿ ನಂ.82/2017 ಪ್ರಕರಣ ಇದೆ ಎಂದರೆ ಸರಿ. ಈ ಪ್ರಕರಣದ 1 ರಿಂದ 14 ನೇ ಆರೋಪಿಗಳು ನಮ್ಮ ಗ್ರಾಮದ ಅರಳೀಕಟ್ಟೆಯ ಮೇಲೆ ಕುಳಿತಿದ್ದಾಗ ನಾನು ಮತ್ತು ಇತರರು ಅವರ ಮೇಲೆ ದಾಳಿ ಮಾಡಿ 4 ಮತ್ತು 6 ನೇ ಆರೋಪಿಗಳನ್ನು ಕೊಲೆ ಮಾಡಿದ್ದೇವೆಂದು ನಮ್ಮ ಮೇಲೆ ಆರೋಪ ಹೊರಿಸಲಾಗಿದೆ ಎಂದರೆ ಸರಿ. ಈ ಪ್ರಕರಣದ ಆರೋಪಿಗಳು ಎಸ್ ಸಿ ನಂ.82/2017 ರಲ್ಲಿ ಸಾಕ್ಷಿದಾರರು ಎಂದರೆ ಕೆಲವರು ಸಾಕ್ಷಿದಾರರು ಎಂದು ನುಡಿಯುತ್ತಾರೆ. ಸದರಿ ಪ್ರಕರಣದಿಂದ ತಪ್ಪಿಸಿಕೊಳ್ಳಲು ನಾವು ಸಾಕ್ಷಿಗಳ ವಿರುದ್ಧ ದೂರು ನೀಡಿ ಈ ಪ್ರಕರಣ ದಾಖಲಿಸಿದ್ದೇವೆಂದರೆ ಸರಿಯಲ್ಲ. ಚಾಕು, ಮಚ್ಚು, ರಾಡುಗಳಿಂದ ಆರೋಪಿಗಳು ಹಲ್ಲೆ ಮಾಡಿದರು ಎಂದು ನಾನು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. 7 ಮತ್ತು 8 ನೇ ಆರೋಪಿಗಳು ಯಾವುದೇ ತಪ್ಪು ಮಾಡದೇ ಇದ್ದರೂ ಅವರ ಮೇಲೆ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆಂದರೆ ಸರಿಯಲ್ಲ.

(ಉಳಿದಂತೆ 1 ರಿಂದ 3 ನೇ ಆರೋಪಿಗಳ ಪರ ವಕೀಲರ ಪಾಟೀ ಸವಾಲನ್ನು ಅಳವಡಿಸಿಕೊಳ್ಳುವುದಾಗಿ ನುಡಿದಿರುತ್ತಾರೆ ಮತ್ತು ಅದರಂತೆ ಅಳವಡಿಸಿಕೊಳ್ಳಲಾಯಿತು.)

(ಮರು ವಿಚಾರಣೆಃಇಲ್ಲ)

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿದೆ.)

ಓ.ಹೇ.ಕೇ.ಸ.ಒ.

(ಯಾದವ ಕೆ.)
4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಮಂಡ್ಯ.